ದಿನಾಂಕಃ 26.12.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ 1ನೇ ಆರೋಪಿ ಪರ ಮಾನ್ಯ ವಕೀಲರಿಂದ**

ಹತ್ತಿಯ ತುಂಡಿನಿಂದ ಬ್ಯಾಗಿನ ಹಣ ಇಟ್ಟ ಭಾಗವನ್ನು ಒರೆಸಿ ಅದನ್ನು ದ್ರಾವಣದಲ್ಲಿ ಅದ್ದಿದಾಗ ಪಿಂಕ್ ಬಣ್ಣಕ್ಕೆ ತಿರುಗಿತು ಎಂದು, ಆ ದ್ರಾವಣವನ್ನು ಸಂಗ್ರಹಿಸಿ ಆರ್ಟಿಕಲ್ 13 ಮತ್ತು 13(ಎ) ಎಂದು ನೀಡಲಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹತ್ತಿಯ ತುಂಡಿಗೆ ಆರ್ಟಿಕಲ್ 14 ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಪ್ಪು ಬಣ್ಣದ ಬ್ಯಾಗನ್ನು ಜಪ್ತು ಮಾಡಲಾಯಿತು ಎಂದು, ಅದಕ್ಕೆ ಆರ್ಟಿಕಲ್ 16 ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-1 ರವರು 2ನೇ ಆರೋಪಿ ಮತ್ತು ಆತನ ನಡುವಿನ ಸಂಭಾಷಣೆಯನ್ನು ವಾಯ್ಸು ರೆಕಾರ್ಡರನಲ್ಲಿ ರೆಕಾರ್ಡ ಮಾಡಿದ್ದನು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಾಯ್ಸು ರೆಕಾರ್ಡರನ್ನು ಪ್ಲೇ ಮಾಡಿ ಕೇಳಿಸಲಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ವಾಯ್ಸು ರೆಕಾರ್ಡರನಲ್ಲಿ ಇದ್ದ ಧ್ವನಿ ಮುದ್ರಣವನ್ನು ಲ್ಯಾಪಟಾಪ ಸಹಾಯದಿಂದ ಡಿವಿಡಿ ಗಳಿಗೆ ಕಾಪಿ ಮಾಡಲಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಎಸಿಬಿ ಪೊಲೀಸರು 1ನೇ ಆರೋಪಿಯನ್ನು ನಮ್ಮ ಹೊಟೇಲಗೆ ಕರೆದುಕೊಂಡು ಬರುವ ಮೊದಲು ನಾನು 1ನೇ ಆರೋಪಿಯನ್ನು ಅಲ್ಲಿಯವರೆಗೆ

ನೋಡಿರಲಿಲ್ಲ ಎಂದರೆ ನಿಜ. ಚಾಸಾ–1 ರವರು ಎಸಿಬಿ ಪೊಲೀಸರಿಗೆ ದೂರು ಕೊಟ್ಟ ನಂತರ ಚಾಸಾ–1 ರವರು ನನಗೆ ಹೇಳಿದಾಗ ಈ ಪ್ರಕರಣದ ಬಗ್ಗೆ ನನಗೆ ಗೊತ್ತಾಯಿತು ಎಂದರೆ ನಿಜ. ಸಾಕ್ಷಿಯು ನನ್ನ ಸಮಕ್ಷಮ ನಡೆದ ಘಟನೆಗಳೆಲ್ಲವೂ ಗೊತ್ತು ಎನ್ನುತ್ತಾರೆ.

ಎಸಿಬಿ ಅವರು ಆರೋಪಿ ನಂ.1 ಮತ್ತು 2 ರವರನ್ನು ನಮ್ಮ ಹೊಟೇಲನಿಂದ ಕಾರ್ಮಿಕ ಕಚೇರಿಗೆ ಕರೆದುಕೊಂಡು ಬಂದರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹೊಟೇಲನಲ್ಲಿ ಘಟನಾ ಸ್ಥಳದ ನಿಪಿ–4 ನಕಾಶೆ ತಯಾರಿಸಲಾಯಿತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರ್ಮಿಕ ಕಚೇರಿಯಲ್ಲಿ ಆರೋಪಿತರು ಅವರ ಲಿಖಿತ ವಿವರಣೆಯನ್ನು ಬರೆದುಕೊಟ್ಟರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ಹೊಟೇಲನಲ್ಲಿ ಮತ್ತು ಕಾರ್ಮಿಕ ಕಚೇರಿಯಲ್ಲಿ ಪೊಟೋಗಳನ್ನು ತೆಗೆಯಲಾಗಿತ್ತು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ನಂ.1 ಮತ್ತು 2 ರವರ ಮಾದರಿ ಧ್ವನಿಯನ್ನು ಮತ್ತು ನನ್ನ ಮತ್ತು ಚಾಸಾ–1 ರವಿ ರವರ ಮಾದರಿ ಧ್ವನಿಯನ್ನು ಎಸಿಬಿ ಯವರು ರೆಕಾರ್ಡ ಮಾಡಿಕೊಂಡರು ಎಂದು, ಆ ರೀತಿ ರೆಕಾರ್ಡ ಮಾಡಿದ ನಂತರ ಅವುಗಳನ್ನು ಡಿವಿಡಿ ಗಳಿಗೆ ಕಾಪಿ ಮಾಡಿ ಆರ್ಟಿಕಲ್ ನಂ 7 ರಿಂದ 21 ರವರೆಗೆ ಕೊಟ್ಟರು ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಕಾರ್ಮಿಕ ಕಚೇರಿಯಲ್ಲಿ ಸುಮಾರು 2 ರಿಂದ 3 ಗಂಟೆ ಪ್ರಕ್ರಿಯೇ

ಮಾಡಲಾಗಿತ್ತು. ಕಾರ್ಮಿಕ ಕಚೇರಿಯಲ್ಲಿ ನಮ್ಮ ಹೊಟೇಲಗೆ ಸಂಬಂಧಪಟ್ಟ ದಾಖಲೆಗಳನ್ನು ನನ್ನ ಸಮಕ್ಷಮ ಎಸಿಬಿ ಅವರು ಜಪ್ತು ಮಾಡಿಲ್ಲ. ಮು.ಮಾ–1 ರಿಂದ 21 ಗಳಿಗೂ, ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಮು.ಮಾ–21 ನೋಟುಗಳಿಗೂ ಆರೋಪಿತರಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ಚಾಸಾ–3 ದತ್ತಾತ್ರೇಯ ಜಾಧವ ನನ್ನ ಸಂಬಂಧಿಕನಾಗಿದ್ದರಿಂದ ನಾನು ಚಾಸಾ–1 ರವಿ ಶಿಂಧೆ, ಚಾಸಾ–3 ದತ್ತಾತ್ರೇಯ ಎಲ್ಲರೂ ಸೇರಿ ಆರೋಪಿತರ ವಿರುದ್ಧ ಈ ಸುಳ್ಳು ಕೇಸು ಹಾಕಿದ್ದೇವೆ ಎಂದರೆ ಸರಿಯಲ್ಲ. ನಾವು ಯಾವುದೇ ದಾಖಲೆಗಳಿಲ್ಲದೇ ಬೇಕಾಯ್ದೆ ಶೀರವಾಗಿ ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲ ನಡೆಸುತ್ತಿದ್ದರಿಂದ ಅದಕ್ಕೆ ಸಂಬಂಧಪಟ್ಟ ದಾಖಲೆಗಳನ್ನು ಹಾಜರು ಮಾಡುವಂತೆ 1ನೇ ಆರೋಪಿ ನೋಟಿಸು ಕೊಟ್ಟ ನಂತರ ಆ ದಾಖಲೆಗಳನ್ನು ನಾವು ಹಾಜರುಪಡಿಸದೇ ನಮ್ಮ ಕಾನೂನುಬಾಹೀರ ಕೃತ್ಯವನ್ನು ಮುಚ್ಚಿ ಹಾಕಲು ಆರೋಪಿತರ ವಿರುದ್ಧ ಈ ಸುಳ್ಳು ಕೇಸು ಹಾಕಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಆರೋಪಿತರು ಯಾವತ್ತೂ ನಮ್ಮ ಹೊಟೇಲನಲ್ಲಿ ಲಂಚದ ಹಣ ಕೇಳಿಲ್ಲ ಎಂದರೆ ಸರಿಯಲ್ಲ. 2ನೇ ಆರೋಪಿಯು ಯಾವತ್ತೂ ಲಂಚದ ಹಣ ಪಡೆದಿಲ್ಲ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ಎಲ್ಲ ಅಂಶಗಳು ಸುಳ್ಳು ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೆ ಸರಿ ಅದೆ

4ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ
ನ್ಯಾಯಾಧೀಶರು (ಪಿಸಿಎ) ಬೆಳಗಾವಿ.